**ಮೌಂಟ್ ಗಿಬ್ಸ್–** ಇದು ಯೋಸೆಮಿಟಿಯ ಇನ್ನೊಂದು ಗಡಿ. ಸುಮಾರು 12700 ಅಡಿ ಎತ್ತರದ ಆ ಪರ್ವತವು ಚಾರಣಿಗರಿಗೆ ತೆರೆದಿದ್ದರೂ ಅಷ್ಟೊಂದು ಜನಪ್ರಿಯವಲ್ಲ ಮಾತ್ರವಲ್ಲ, ಅಲ್ಲಿ ರಾತ್ರಿ ತಂಗುವಂತಿಲ್ಲ.

**ಸೆಂಟೆನಿಯಲ್ ರಾಕ್–** ಯೋಸೆಮಿಟಿ ಜಲಪಾತದ ಎದುರಿನ ಕೋಡುಬಂಡೆ. 7000 ಅಡಿ ಎತ್ತರದ ಇದು ವಿಶೇಷವಾಗಿ ಕಾಣುತ್ತದೆ. ಬಂಡೆ ಏರುವ ಸಾಹಸಿಗಳಿಗೆ ನೆಚ್ಚಿನ ತಾಣವಾಗಿದ್ದರೂ ಬಂಡೆಯು ತುಂಬಾ ಕಡಿದಾಗಿರುವುದರಿಂದ ಅಪಾಯವೂ ಅಷ್ಟೇ ಇದೆ.


**ತ್ರೀ ಬ್ರದರ್ಸ್ (ಮೂರು ಸಹೋದರರ ಬಂಡೆ)–** ಎಲ್ ಕ್ಯಾಪಿಟಾನ್ ಬಂಡೆಯ ಪಕ್ಕಕ್ಕಿರುವ ಇದು ಮೂರು ಕೋಡುಗಳನ್ನು ಹೊಂದಿರುವುದರಿಂದ ಈ ಹೆಸರು ಬಂದಿದೆ. 7783 ಅಡಿ ಎತ್ತರದ ಈ ಬಂಡೆಯ ಎತ್ತರದ ಕೋಡಿಗೆ ಈಗಲ್ ಪೀಕ್ ಎಂದೂ, ಉಳಿದೆರಡನ್ನು ಮಿಡ್ಲ್ ಬ್ರದರ್ ಮತ್ತು ಲೋವರ್ ಬ್ರದರ್ ಎಂದು ಕರೆಯಲಾಗುತ್ತದೆ. ಮೂಲ ನಿವಾಸಿಗಳ ಜೊತೆಗೆ ಸೈನ್ಯ ಹಾಗೂ ಯೂರೋಪ್ ವಸಾಹತುಶಾಹಿಗಳು ನಡೆಸಿದ ಯುದ್ಧದ ನಂತರ ಮೂಲನಿವಾಸಿಗಳ ನಾಯಕ ತೆನಾಯಾ ಎಂಬುವನ ಮೂರು ಮಕ್ಕಳನ್ನು ಸೆರೆಹಿಡಿದ ನಂತರ ಸೈನ್ಯವು ಬಂಡೆಯನ್ನು ಆ ಹೆಸರಿನಿಂದ ಕರೆಯಲಾರಂಭಿಸಿತು ಎಂದೂ ಹೇಳುತ್ತಾರೆ. ಅಹವಾನೀಚಿ ಮೂಲನಿವಾಸಿಗಳು ಆ ಬಂಡೆಯನ್ನು ಜಿಗಿಯಲು ಸಿದ್ಧವಾಗಿ ಕುಳಿತ ಕಪ್ಪೆಗಳು (Pompomposus) ಎಂದು ಕರೆಯುತ್ತಿದ್ದರಂತೆ.

**ಯೋಸೆಮಿಟಿ ಜಲಪಾತ–** ಯೋಸೆಮಿಟಿ ಅಭಯಾರಣ್ಯದ ಪ್ರಮುಖ ಜಲಪಾತ. 2425 ಅಡಿ ಎತ್ತರದಿಂದ ಎರಡು ಹಂತಗಳಲ್ಲಿ ಬೀಳುವ ಆ ಜಲರಾಶಿಯನ್ನು ನೋಡುವುದೇ ಹಬ್ಬ. ಬಂಡೆಯ ಮೇಲಿನ ತುದಿಯಿಂದ ಬೀಳುವ ಜಲಪಾತದ ಮೇಲ್ಭಾಗವು (Upper falls) 1430 ಅಡಿ ಎತ್ತರವಾಗಿದೆ. ಅಲ್ಲಿಂದ 675 ಅಡಿ ಕೆಳಗಿಳಿದು ಮತ್ತೆ 320 ಅಡಿ ಎತ್ತರದಿಂದ ಕೆಳಗೆ ಧುಮುಕುತ್ತದೆ (Lower falls). ನಡುವಿನ ಭಾಗವು ನೆಲಮಟ್ಟದಿಂದ ಕಾಣುವುದಿಲ್ಲ. ಚಾರಣಿಗರು, ಬಂಡೆ ಏರುವ ಸಾಹಸಿಗರು ಹಿಂಬದಿಯ ದಾರಿಯಿಂದ ಜಲಪಾತದ ನೆತ್ತಿಯ ಮೇಲೇರಿ ಹೋಗುವುದೂ ಇದೆ. ನೆಲಮಟ್ಟದಿಂದ ವಿವಿಧ ಕಡೆಗಳಿಂದ ವಿವಿಧ ರೂಪಗಳನ್ನು ಸವಿಯಬಹುದು. **ವಧುವಿನ ಸೆರಗು ಜಲಪಾತ (Bridalveil falls)–** ಯೋಸೆಮಿಟಿಯ ಅತ್ಯಂತ ಸುಂದರ ಹಾಗೂ ಜನಪ್ರಿಯ ಜಲಪಾತ. ಬ್ರೈಡಲ್ ವೇಲ್ ಎಂದರೆ ಕ್ರಿಶ್ಚಿಯನ್ ವಿವಾಹದ ಸಂದರ್ಭದಲ್ಲಿ ವಧು ಧರಿಸುವ ಹಿಂಬದಿಯ ಬಿಳಿಯ ಸೆರಗು ಎನ್ನಬಹುದು. ಅಷ್ಟು ಸುಂದರ ಜಲಪಾತವಿದು. ನಮ್ಮ ಜೋಗ ಜಲಪಾತದ 'ರಾಣಿ' ಇದ್ದಂತೆ. 617 ಅಡಿ ಎತ್ತರದಿಂದ ಧುಮುಕುವ ಜಲಪಾತದ ಬುಡದವರೆಗೂ ಹೋಗಿ ಜಲಸಿಂಚನ ಮಾಡಿಸಿಕೊಳ್ಳಬಹುದು. ಓಸ್ಟ್ರಾಂಡೆರ್ ಸರೋವರ (Ostrander lake) ಇದರ ಪ್ರಮುಖ ಜಲ ಆಕರ.

**ಸೆಂಟಿನಲ್ ಫಾಲ್ಸ್–** ಆರು ಹಂತಗಳಲ್ಲಿ 1920 ಅಡಿ ಎತ್ತರದಿಂದ ಬೀಳುವ ಜಲಪಾತವು ಬೇಸಿಗೆ ಬರುತ್ತಿದ್ದಂತೆ ಕ್ರಮೇಣ ಸೊರಗಿ ಹೋಗುತ್ತದೆ. ಆರು ಹಂತಗಳಲ್ಲಿ ಒಂದು ಹಂತ ಮಾತ್ರ ಸುಮಾರು 500 ಅಡಿ ಎತ್ತರವಾಗಿದ್ದು ಸೆಂಟಿನಲ್ ಬಂಡೆ ಶ್ರೇಣಿಗಳ ನಡುವೆ ಹಾದುಬರುತ್ತದೆ.



ಸ್ನಿಗ್ಧಸುಂದರ ಯೋಸೆಮಿಟಿ ಜಲಪಾತ



ಯೋಸೆಮಿಟಿಯ ಪ್ರಮುಖ ಹೆಬ್ಬಂಡೆ ಎಲ್ ಕ್ಯಾಪಿಟಾನ್